ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]
ಒಟ್ಟು ಪ್ರಶ್ನೆಗಳ ಸಂಖ್ಯೆ : 25 + 25 ]
Total No. of Questions : 25 + 25 ]

**ಸಂಕೇತ ಸಂಖ್ಯೆ : 98-K**
**Code No. : 98-K**

# A

**CCE RR**

**Question Paper Serial No. 600**

ಇಲ್ಲಿಂದ ಕತ್ತರಿಸಿ

## ವಿಷಯ : ಕರ್ನಾಟಕ ಸಂಗೀತ / ಹಿಂದೂಸ್ಥಾನಿ ಸಂಗೀತ – ಶಾಸ್ತ್ರ ವಿಭಾಗ
## Subject : CARNATIC MUSIC / HINDUSTANI MUSIC — THEORY

**(ಕನ್ನಡ ಮಾಧ್ಯಮ / Kannada Medium)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

**(ಕರ್ನಾಟಕ ಸಂಗೀತ ಅಥವಾ ಹಿಂದೂಸ್ಥಾನಿಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳುವುದು)**

ದಿನಾಂಕ : 27. 06. 2022 ] [ Date : 27. 06. 2022

ಸಮಯ : ಮಧ್ಯಾಹ್ನ 2-00 ರಿಂದ ಸಂಜೆ 3-45 ರವರೆಗೆ ] [ Time : 2-00 P.M. to 3-45 P.M.

ಗರಿಷ್ಠ ಅಂಕಗಳು : 40 ] [ Max. Marks : 40

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 25 + 25 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**Tear here**

## ( ಕರ್ನಾಟಕ ಸಂಗೀತ )

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ : 8 × 1 = 8**

1. ಈ ಕೆಳಗಿನವುಗಳಲ್ಲಿ ಪ್ರಕೃತಿ ಸ್ವರಗಳು

   (A) ಸ, ಪ

   (B) ರಿ, ಗ

   (C) ನಿ, ಗ

   (D) ಮ, ದ

2. ಹಿಂದೂಸ್ಥಾನಿ ಸಂಗೀತ ಪದ್ಧತಿಯ ತಾಳಕ್ಕೆ ಒಂದು ಉದಾಹರಣೆ

   (A) ರೂಪಕ ತಾಳ

   (B) ಝಪ್‌ತಾಲ್

   (C) ಮಠ್ಯತಾಳ

   (D) ಏಕತಾಳ

3. ಸಂಗೀತ ರಚನೆಗಳು ತಾಳದೊಡನೆ ಪ್ರಾರಂಭವಾಗುವ ಸ್ಥಳವನ್ನು

   (A) ಜಾತಿ ಎನ್ನುವರು

   (B) ಅಂಗ ಎನ್ನುವರು

   (C) ಗ್ರಹ ಎನ್ನುವರು

   (D) ಕಾಲ ಎನ್ನುವರು

4. 'ಶ್ಯಾಮಕೃಷ್ಣ' ಅಂಕಿತದಿಂದ ಕೃತಿರಚನೆ ಮಾಡಿದ ವಾಗ್ಗೇಯಕಾರರು

(A) ಮುತ್ತುಸ್ವಾಮಿ ದೀಕ್ಷಿತರು

(B) ಶ್ಯಾಮಾಶಾಸ್ತ್ರಿಗಳು

(C) ತ್ಯಾಗರಾಜರು

(D) ಮುತ್ತಯ್ಯ ಭಾಗವತರು

5. ಮಾಯಾಮಾಳವಗೌಳ ರಾಗಕ್ಕೂ, ಕಾಮವರ್ಧಿನಿ ರಾಗಕ್ಕೂ ವ್ಯತ್ಯಾಸ ಕಲ್ಪಿಸುವ ಸ್ವರ

(A) ಪಂಚಮ

(B) ನಿಷಾದ

(C) ರಿಷಭ

(D) ಮಧ್ಯಮ

6. ಮ್ಯಾಂಡೊಲಿನ್ ಒಂದು

(A) ಘನ ವಾದ್ಯ

(B) ಸುಷಿರ ವಾದ್ಯ

(C) ತತ ವಾದ್ಯ

(D) ಜಲ ವಾದ್ಯ

7. ಕರ್ನಾಟಕ ಸಂಗೀತ ತ್ರಿಮೂರ್ತಿಗಳ ಜೀವನ ಚರಿತ್ರೆಯಲ್ಲಿ ಕಂಡುಬರುವ ಸಾಮ್ಯತೆ

(A) ಅಂಕಿತ

(B) ಜನ್ಮಸ್ಥಳ

(C) ಆರಾಧ್ಯದೈವ

(D) ವಿದ್ಯಾಗುರುಗಳು

8. ನೀರಿನಿಂದ ನಾದೋತ್ಪತ್ತಿ ಮಾಡುವ ವಾದ್ಯ

(A) ಪಿಟೀಲು

(B) ಹಾರ್ಮೋನಿಯಂ

(C) ಕ್ಲಾರಿಯೋನೆಟ್

(D) ಜಲತರಂಗ್

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ : 8 × 1 = 8**

9. ಕರ್ನಾಟಕ ಸಂಗೀತ ಪದ್ಧತಿಯ ಮೋಹನ ರಾಗವನ್ನು ಹಿಂದೂಸ್ಥಾನಿ ಸಂಗೀತ ಪದ್ಧತಿಯಲ್ಲಿ ಯಾವ ಹೆಸರಿನಿಂದ ಕರೆಯುತ್ತಾರೆ ?

10. ಮಲಹರಿ ರಾಗದ ಜನಕ ರಾಗದ ಹೆಸರನ್ನು ಬರೆಯಿರಿ.

11. ಔಡವ ರಾಗ ಮತ್ತು ಷಾಡವ ರಾಗಗಳಿಗಿರುವ ಒಂದು ವ್ಯತ್ಯಾಸವೇನು ?

12. ಅವನದ್ಧ ವಾದ್ಯಗಳೆಂದರೇನು ?

13. ಮಾರ್ಗ ಸಂಗೀತ ಹಾಗೂ ದೇಶೀ ಸಂಗೀತಗಳಿಗಿರುವ ಒಂದು ವ್ಯತ್ಯಾಸವನ್ನು ಬರೆಯಿರಿ.

14. ತ್ಯಾಗರಾಜರ ಆರಾಧ್ಯ ದೈವ ಯಾರು ?

15. ಕರ್ನಾಟಕ ಸಂಗೀತ ಪದ್ಧತಿ ಹಾಗೂ ಹಿಂದೂಸ್ಥಾನಿ ಸಂಗೀತ ಪದ್ಧತಿಗಳಿಗಿರುವ ಯಾವುದಾದರೂ ಒಂದು ಸಾಮ್ಯತೆಯನ್ನು ಬರೆಯಿರಿ.

16. ಮೋರ್ಚಿಂಗ್ ಅನ್ನು ಘನವಾದ್ಯವೆಂದು ಕರೆಯಲು ಕಾರಣವೇನು ?

**III. ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ : 7 × 2 = 14**

17. ಏಕತಾಳವು ರೂಪಕತಾಳಕ್ಕಿಂತ ಹೇಗೆ ಭಿನ್ನವಾಗಿದೆ ?

18. ಶ್ರೀ ಮುತ್ತುಸ್ವಾಮಿ ದೀಕ್ಷಿತರು 'ಗುರುಗುಹ' ಎಂಬ ಅಂಕಿತದೊಡನೆ ಕೃತಿರಚನೆಯನ್ನು ಪ್ರಾರಂಭಿಸಲು ಕಾರಣವೇನು ?

19. ಕರ್ನಾಟಕ ಸಂಗೀತ ಪದ್ಧತಿಗಿಂತ ಹಿಂದೂಸ್ಥಾನಿ ಸಂಗೀತ ಪದ್ಧತಿಯು ಭಿನ್ನ. ಹೇಗೆ ? (ಎರಡು ಭಿನ್ನತೆಗಳನ್ನು ಮಾತ್ರ ಬರೆಯಿರಿ).

20. ಸಂಪೂರ್ಣ ರಾಗಗಳಿಗೆ ಎರಡು ಉದಾಹರಣೆಗಳನ್ನು ಕೊಡಿ.

21. ಶಂಕರಾಭರಣ ರಾಗಕ್ಕಿಂತ ಮೇಚಕಲ್ಯಾಣಿ ರಾಗವು ಭಿನ್ನ. ಹೇಗೆ ?

22. ಮಂದ್ರಸ್ಥಾಯಿ ಹಾಗೂ ತಾರಸ್ಥಾಯಿಗಳ ನಡುವಿನ ಎರಡು ವ್ಯತ್ಯಾಸಗಳನ್ನು ಬರೆಯಿರಿ.

23. ಸುಷಿರ ಮತ್ತು ತತವಾದ್ಯಗಳ ನಡುವಿನ ಒಂದು ವ್ಯತ್ಯಾಸವನ್ನು ಒಂದೊಂದು ಉದಾಹರಣೆಯೊಂದಿಗೆ ಬರೆಯಿರಿ.

**IV. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ :**

24. ತಿಶ್ರಜಾತಿ ತ್ರಿಪುಟ ತಾಳದ ಅಲಂಕಾರವನ್ನು ಸ್ವರಲಿಪಿಯಲ್ಲಿ ವಿನ್ಯಾಸಗೊಳಿಸಿ ಬರೆಯಿರಿ. **4**

25. ಕನಕದಾಸರ ಜೀವನಚರಿತ್ರೆಯನ್ನು ವಿವರಿಸಿ. **6**

## (ಹಿಂದೂಸ್ಥಾನಿ ಸಂಗೀತ)

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ : 8 × 1 = 8**

1. ಸಾಮವೇದದ ಉಪವೇದ

   (A) ಯಜುರ್ವೇದ

   (B) ಋಗ್ವೇದ

   (C) ಗಂಧರ್ವವೇದ

   (D) ಅಥರ್ವಣವೇದ

2. ಸ್ವರಲಿಪಿಯಲ್ಲಿ 'ಮ' ಸ್ವರದ ಮೇಲೆ ಒಂದು ಲಂಬ ಗೆರೆ ಎಳೆಯುವರು. ಏಕೆಂದರೆ, ಅದು

   (A) ಕಣ್ ಸ್ವರ

   (B) ಕೋಮಲ ಸ್ವರ

   (C) ಶುದ್ಧ ಸ್ವರ

   (D) ತೀವ್ರ ಸ್ವರ

3. ಸಪ್ತಕದಲ್ಲಿರುವ ಒಟ್ಟು ಸ್ವರಗಳ ಸಂಖ್ಯೆ

   (A) 7

   (B) 8

   (C) 10

   (D) 12

4. ತಾಳಲಿಪಿಯಲ್ಲಿ ತಾಳದ ಮೊದಲನೆಯ ಮಾತ್ರೆಯ ಮೇಲೆ 'X' ಈ ಚಿಹ್ನೆಯನ್ನು ಬರೆಯುವರು. ಏಕೆಂದರೆ ಅದು

(A) ಸಮ್ ಆಗಿದೆ

(B) ಖಾಲಿ ಆಗಿದೆ

(C) ಪೆಟ್ಟು ಆಗಿದೆ

(D) ಖಂಡ ಆಗಿದೆ

5. ರಾಗದ ಅತ್ಯಂತ ಪ್ರಮುಖ ಸ್ವರ

(A) ಸಂವಾದಿ

(B) ವಿವಾದಿ

(C) ವಾದಿ

(D) ಅನುವಾದಿ

6. ಕೊಳಲನ್ನು ಸುಷಿರವಾದ್ಯವೆಂದು ಕರೆಯಲು ಕಾರಣ, ಈ ವಾದ್ಯದಲ್ಲಿ

(A) ಗಾಳಿಯಿಂದ ನಾದ ಉತ್ಪತ್ತಿಯಾಗುತ್ತದೆ

(B) ತಂತಿಯ ಕಂಪನದಿಂದ ನಾದ ಉತ್ಪತ್ತಿಯಾಗುತ್ತದೆ

(C) ಇದು ಬಿದಿರಿನಿಂದ ತಯಾರಿಸಲ್ಪಟ್ಟಿದೆ

(D) ಇದು ಲೋಹದಿಂದ ತಯಾರಿಸಲ್ಪಟ್ಟಿದೆ

7. ಹಿಂದೂಸ್ಥಾನಿ ಸಂಗೀತವನ್ನು 'ಉತ್ತರಾದಿ ಸಂಗೀತ' ಎಂದು ಕರೆಯುವರು. ಏಕೆಂದರೆ, ಈ ಸಂಗೀತ ಪ್ರಕಾರವು

(A) ದಕ್ಷಿಣ ಭಾರತದಲ್ಲಿ ಬೆಳೆದು ಬಂತು

(B) ಉತ್ತರ ಭಾರತದಲ್ಲಿ ಬೆಳೆದು ಬಂತು

(C) ಕರ್ನಾಟಕದಲ್ಲಿ ಬೆಳೆದು ಬಂತು

(D) ಪ್ರಪಂಚದ ದಕ್ಷಿಣ ಭಾಗದಲ್ಲಿ ಬೆಳೆದು ಬಂತು

8. ಪಂಡಿತ ಬಸವರಾಜ ರಾಜಗುರುಗಳ ಜನ್ಮಸ್ಥಳ

(A) ಗದಗ

(B) ಧಾರವಾಡ

(C) ಯಲಿವಾಳ

(D) ಬೆಳಗಾವಿ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ : 8 × 1 = 8**

9. ಅಮೀರ ಖುಸ್ರೊ ಯಾವ ಸಂಗೀತ ಪ್ರಕಾರದಲ್ಲಿ ಪ್ರಸಿದ್ಧರಾದರು ?

10. ಕಾಫಿ ರಾಗದ ವಾದಿ ಸ್ವರವನ್ನು ಹೆಸರಿಸಿ.

11. ಸಂಗೀತದ ಕಲಿಕಾರ್ಥಿಗಳಿಗೆ ಶ್ರವಣಜ್ಞಾನದ ಅಗತ್ಯತೆ ಇದೆ. ಏಕೆ ?

12. ಜೌನಪುರಿ ರಾಗದ ಆರೋಹಣ–ಅವರೋಹಣವನ್ನು ಬರೆಯಿರಿ.

13. ಪಂಡಿತ ವಿಷ್ಣು ದಿಗಂಬರ ಫಲುಸ್ಕರ್‌ರವರು ಕುರುಡರಾಗಲು ಕಾರಣವೇನು ?

14. ದೇಸ್ ರಾಗವನ್ನು ಔಡವ ಸಂಪೂರ್ಣ ರಾಗವೆಂದು ಕರೆಯಲು ಕಾರಣವೇನು ?

15. ಖಯಾಲ್ ಗಾಯನ ಹಾಗೂ ಧ್ರುಪದ್ ಗಾಯನಕ್ಕೆ ಇರುವ ಒಂದು ಮುಖ್ಯ ವ್ಯತ್ಯಾಸವೇನು ?

16. ಕರ್ನಾಟಕದಲ್ಲಿ ಉತ್ತರಾದಿ ಸಂಗೀತ ಬೇರೂರಲು ಕಾರಣವೇನು ?

**III. ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ : 7 × 2 = 14**

17. ಕರ್ನಾಟಕ ಮತ್ತು ಹಿಂದೂಸ್ಥಾನಿ ತಾಳಗಳಲ್ಲಿ ಕಂಡುಬರುವ ಎರಡು ವ್ಯತ್ಯಾಸಗಳನ್ನು ಬರೆಯಿರಿ.

18. ಶುದ್ಧ ಸ್ವರ ಮತ್ತು ಕೋಮಲ ಸ್ವರಗಳಿಗಿರುವ ವ್ಯತ್ಯಾಸವನ್ನು ಬರೆಯಿರಿ.

19. ಭೈರವ್ ಮತ್ತು ಭೈರವಿ ರಾಗಗಳಲ್ಲಿ ಕಂಡುಬರುವ ಎರಡು ವ್ಯತ್ಯಾಸಗಳನ್ನು ಬರೆಯಿರಿ.

20. ಪಂಡಿತ ಪಂಚಾಕ್ಷರಿ ಗವಾಯಿಗಳನ್ನು 'ಉಭಯ ಗಾಯನಾಚಾರ್ಯ' ಎಂದು ಕರೆಯಲು ಕಾರಣವೇನು ?

21. ಕೆಳಗೆ ಕೊಟ್ಟಿರುವ ರಾಗಗಳನ್ನು ಕರ್ನಾಟಕ ಸಂಗೀತ ಹಾಗೂ ಹಿಂದೂಸ್ಥಾನಿ ಸಂಗೀತದ ರಾಗಗಳಾಗಿ ವಿಂಗಡಿಸಿ.

ಭೂಪಾಲಿ, ಮೋಹನ, ಚಕ್ರವಾಕ, ಅಹೀರ್ ಭೈರವ.

22. ಛೋಟಾ ಖಯಾಲ್‌ನ ಎರಡು ಲಕ್ಷಣಗಳನ್ನು ಬರೆಯಿರಿ.

23. ತಂತಿವಾದ್ಯಗಳು ಅವನದ್ಧ ವಾದ್ಯಗಳಿಗಿಂತ ಭಿನ್ನ ಹೇಗೆ ? ವಿವರಿಸಿ.

**IV. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ :**

24. ಬೃಂದಾವನಿ ಸಾರಂಗ ರಾಗದ ಸ್ವರಗೀತೆಯನ್ನು ಸ್ವರಲಿಪಿಬದ್ಧಗೊಳಿಸಿ. **4**

25. ಚೌತಾಳವು ಧೃತ್ ಏಕತಾಳಕ್ಕಿಂತ ಹೇಗೆ ಭಿನ್ನವಾಗಿದೆ ? ವಿವರಿಸಿ. ಚೌತಾಳದ ಮಾಹಿತಿಯನ್ನು ಠೇಕಾದೊಂದಿಗೆ ಬರೆಯಿರಿ. **6**